

# ಎದ್ದೇಳಲಿರುವ ಸಾಮಾನ್ಯ ಸೇವಕರು



## ನುಡಿಯಲ್ಪಟ್ಟ ಪ್ರವಾದನೆ

ವರ್ಷದ ಮೊದಲನೆ ದಿನದಲ್ಲಿ ನಾವು ಕಾಯ್ದುಕೊಂಡು ಪ್ರಾರ್ಥಿಸುತ್ತಿರುವಲ್ಲಿ, ದೇವರ ಮಾತು ಉಂಟಾಗಿ: ನನ್ನ ಜನವೇ ಕೇಳು, ಲೋಕದ ಅನೇಕ ಭಾಗಗಳಲ್ಲಿಯೂ, ಗುರುತಿಸಲ್ಪಡದಂತ ಕೆಲವು ಸ್ಥಳಗಳಿಂದಲೂ, ನನ್ನ ನಾಮವನ್ನು ಹೊಂದಿರುವ ನನ್ನ ಮಕ್ಕಳು, ನನ್ನ ಚಿತ್ತವನ್ನು ನೆರವೇರಿಸುವದಕ್ಕಾಗಿ ಕಾದಿದ್ದಾರೆ. ನನಗಾಗಿ ಕಾರ್ಯವನ್ನು ಮಾಡುವ, ನನಗಾಗಿ ವೈರಾಗ್ಯದಿಂದ ಹೊರಡುವ, ಜನರ ಗುಂಪೊಂದು ಮರೆಯಾಗಿ ಇಡಲ್ಪಟ್ಟಿದೆ. ನಾನು ಅವರನ್ನು ಬೆಳಕಿಗೆ ತಂದು, ಪ್ರಕಟಪಡಿಸಿ ಅವರನ್ನು ಮಹಿಮೆ ಪಡಿಸುವೆನು. ನೀವು ತಿಳಿಯದ ಸ್ಥಳಗಳಿಂದಲೂ, ನೀವು ನೆನೆಸದ ಭಾಗಗಳಿಂದಲೂ, ನಾವು ಇವರನ್ನು ಎಬ್ಬಿಸುವೆನು. ಇವರು ಲೋಕದ ಶುಭಗಳಲ್ಲಿ ಯಾವದೊಂದನ್ನೂ ಹುಡುಕದೆ, ಲೋಕದ ಜನರಿಂದ ಹುಡುಕಲ್ಪಡದವರಾಗಿ ಇದ್ದಂತವರು. ಇಂತವರು ನಿನ್ನ ದೇಶದಲ್ಲೂ ಇರುವವರಾಗಿದ್ದಾರೆ. ನಾನು ಇವರನ್ನು ಹೊರತಂದು, ನನ್ನ ಹೊಸದಾದ ಶಕ್ತಿಯಿಂದ ಅವರನ್ನು ತುಂಬಿಸಿ, ಇವರ ಕೈಗಳಿಂದ ವಿಶೇಷವಾದ ಮಹತ್ತುಗಳನ್ನು ನಡೆಸಿ, ನನ್ನ ನಾಮವನ್ನು ಜನರ ನಡುವೆ ಮಹಿಮೆಪಡಿಸುವೆನು. ನಾನು ಅವರ ಬಾಯನ್ನು ಮುಟ್ಟುವೆನು, ಆಗ ಅವರು ನನಗೆಂದು ನನ್ನ ಕಾರ್ಯವನ್ನು ಮಾತಾಡುವರು. ಇದರ ನಂತರ, ಇದುವರೆಗೂ ತಮ್ಮನ್ನು ದೊಡ್ಡವರನ್ನಾಗಿ ನೆನೆಸಿಕೊಂಡಿದ್ದ ಅನೇಕರು ನಾಚಿಕೆಗೆ ಈಡಾಗುವರು. ನಾನು ಅವರ ಮುಂದೆ ದೀನರನ್ನೂ, ಚಿಕ್ಕವರನ್ನೂ ಧೂಳಿನಿಂದ ಎಬ್ಬಿಸಿ, ಮಹಿಮೆ ತುಂಬಿರುವ ನನ್ನ ಕೈಗಳಿಂದ ಅವರನ್ನು ಉಪಯೋಗಿಸಿ, ತಮ್ಮನ್ನು ಹೆಚ್ಚಿಸಿಕೊಂಡವರನ್ನೂ, ಗರ್ವದಿಂದ ತುಂಬಿದ್ದ ನನ್ನ ಸೇವಕರುಗಳನ್ನೂ ತಗ್ಗಿಸಿ ಬಿಡುವೆನು. ಮತ್ತೂ, ಲೋಕದ ಕಾರ್ಯಗಳಿಗಾಗಿ ತಮ್ಮ ಮೊಣಕಾಲನ್ನು ಹಾಕದ, ಬಾಳನಿಗೆ ಒಳಪಡದ ಒಂದು ಗುಂಪು ಜನರು ಇನ್ನೂ ಇರುವವರಾಗಿದ್ದಾರೆ. ಇವರು ಲೋಕದ ಆಭರಣಗಳ ಆಸೆಗಳಿಂದಲೂ, ಐಶ್ವರ್ಯದ ಪಾಪದಿಂದಲೂ ಕಳಂಕವಾಗದವರು, ನಾನು ಇವರನ್ನು ಜನರೇ ಅರಿಯದಂತಹ ಚಿಕ್ಕ ಗ್ರಾಮಗಳಿಂದಲೂ, ಗುರುತೇ ಇಲ್ಲದ ಸ್ಥಳಗಳಿಂದಲೂ, ಸಾಮಾನ್ಯಜನರ ಬಳಿಯಿಂದಲೂ, ಹೊರಡುವಂತೆ ಮಾಡುತ್ತೇನೆ. ಇದುವರೆಗೂ ಕಾರ್ಯಮಾಡುತ್ತಾ ಬಂದಂತ ದುಷ್ಟ ಸೇವೆಗಳನ್ನೂ, ಸೇವಕರುಗಳನ್ನೂ, ದೊಬ್ಬಿಹಾಕುವಂತೆ ನಾನು ಇವರನ್ನು ನನ್ನ ಬಲದಿಂದ ತುಂಬಿಸಿ ಉಪಯೋಗಿಸುವೆ. ನನ್ನ ಬೆರಳನ್ನು ಇವರ ಕೈಗಳಲ್ಲಿ ಇಟ್ಟು ಅವರು ಮುಟ್ಟುವಂತದ್ದನ್ನು ನಾನು ಮುಟ್ಟುವೆನು. ಇಂತವರನ್ನು ಉಪಯೋಗಿಸಿ ನನ್ನ ನಾಮವನ್ನು ಮಹಿಮೆಪಡಿಸುವಂತ ಕಾಲ ಇಗೋ ಬೇಗನೆ ಬರುತ್ತಲಿದೆ. ಅದು ನಿನ್ನ ದೇಶದ ಮೇಲೆಯೂ ಬರುತ್ತಿದೆ ಎಂದು ದೇವರಾದ ಕರ್ತನು ನುಡಿಯುತ್ತಾನೆ. (ಪ್ರಕಟಿಸಲ್ಪಟ್ಟ ದಿನ 01.01.2018 ರಾಮನಾಥಪುರ)

## ಪ್ರಾರ್ಥನಾ ಮನವಿ

01. ಈ ಕಡೆಯ ಕಾಲದಲ್ಲಿ ದೇವರಿಗೆಂದು ಕಾರ್ಯಮಾಡುವಂತ, ನಿಜವಾಗಿ ಸೇವೆಮಾಡುವಂತ ಸಾಮಾನ್ಯ ಸೇವಕರು ಎದ್ದೇಳದಂತೆ ಕಾರ್ಯಮಾಡುವ ದುಷ್ಟ ಆತ್ಮಗಳು ಕಟ್ಟಲ್ಪಡುವಂತೆ ಪ್ರಾರ್ಥಿಸಿರಿ. ಸುಳ್ಳು ಕೆಲಸಗಾರರ, ದುಷ್ಟ ಸೇವಕರ ಬಾಯಿಗಳು ಕಟ್ಟಲ್ಪಡುವಂತೆಯೂ, ಜನರು ವಂಚನೆಗೆ ಒಳಪಡದಂತೆ ಕಾಯಲ್ಪಡಲಿಕ್ಕಾಗುವಂತೆಯೂ ಪ್ರಾರ್ಥಿಸಿರಿ.

02. ದೇವರಿಗೆಂದು ಕಾರ್ಯವಾಡುವಂತವರು, ಅನೇಕ ಸ್ಥಳಗಳಲ್ಲಿ ಮರೆಯಾಗಿದ್ದಾರೆ, ದೇವರು ಅವರನ್ನು ಹೊರಗೆ ತರುವಂತೆ ಪ್ರಾರ್ಥಿಸಿರಿ. ಲೋಕದ ಆಭರಣದ ಆಶೆಗಳಿಂದಲೂ, ಪಾಪಗಳಿಂದಲೂ ಕಳಂಕಗೊಳ್ಳದಂತ ಸೇವಕರು ಚಿಕ್ಕ ಗ್ರಾಮಗಳಲ್ಲಿ ಇದ್ದಾರೆ ಎಂದು ದೇವರು ನುಡಿದ್ದಿದ್ದಾನೆ. ಅವರು ಬೇಗನೆ ಮರೆಯಾದ ಸ್ಥಳಗಳಿಂದ ಹೊರಬರುವಂತೆಯೂ, ದೇವರಿಗೆಂದು ಬಲವಾಗಿ ಉಪಯೋಗಿಸಲ್ಪಡುವಂತೆಯೂ ಪ್ರಾರ್ಥಿಸಿರಿ.

03. ದುಷ್ಟ ಶಕ್ತಿಗಳನ್ನು ದೇಶದಿಂದ ಅಗಲಿಸುವೆನು ಎಂದು ದೇವರು ನುಡಿದಿದ್ದಾನೆ. ಆದರಿಂದ, ದೇಶವನ್ನು ಬಿಟ್ಟು ಕೇಡು ಸಂಪೂರ್ಣವಾಗಿ ನೀಗಿಸಲ್ಪಡಲಿಕ್ಕಾಗುವಂತೆಯೂ, ಸಾಮಾನ್ಯ ಜನರನ್ನು ಬೇಟೆಯಾಡುವಂತಹ ಸುಳ್ಳು ಕೆಲಸಗಾರರು, ಕಪಟ ಕೆಲಸಗಾರರು ನಾಚಿಕೇಗೆ ಈಡಾಗುವಂತೆಯೂ ಪ್ರಾರ್ಥಿಸಿರಿ.

04. ದೇಶದಲ್ಲಿ ದೇವರಿಗೆಂದು ಸತ್ಯವಾಗಿ ಕಾಯುತ್ತಿರುವ ಸಾಮಾನ್ಯ ಜನರನ್ನು, ಸಾಮಾನ್ಯ ಸೇವಕರನ್ನು ದೇವರು ತನ್ನ ಬಲದಿಂದ ತುಂಬಿಸುವಂತೆಯೂ, ಅವರ ಮೂಲಕ ಅದ್ಭುತಗಳು, ಮಹತ್ತುಗಳು ನಡೆಯುವಂತೆಯೂ ಪ್ರಾರ್ಥಿಸಿರಿ. ಇದಕ್ಕೆ ತಡೆಯಾಗಿರುವಂತ ಸೈತಾನನ ಎಲ್ಲಾ ಕಾರ್ಯಗಳು ಕಟ್ಟಲ್ಪಡಲಿಕ್ಕಾಗುವಂತೆಯೂ ಪ್ರಾರ್ಥಿಸಿರಿ.